ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

2

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 12/1/2021

# ಸದನ ಸಮಿತಿಗೆ ಬಿಜೆಪಿ ರಾಜೀನಾಮೆ, ಕಾಂಗ್ರೆಸ್ ಆಕ್ಷೇಪ

■ **ವಿಕ ಸುದ್ದಿಲೋಕ** ಬೆಂಗಳೂರು 11/1/21

ಪರಿಷತ್ತಿನಲ್ಲಿ ಕಳೆದ ತಿಂಗಳು ನಡೆದ ಗಲಾಟೆ ಸಂಬಂಧ ತನಿಖೆಗೆ ನೇಮಿಸಲಾಗಿದ್ದ ಸದನ ಸಮಿತಿಗೆ ಬಿಜೆಪಿಯ ಎಚ್. ವಿಶ್ವನಾಥ್ ಹಾಗೂ ಎಸ್.ವಿ.ಸಂಕನೂರು ಅವರು ರಾಜೀನಾಮೆ ಸಲ್ಲಿಸಿರುವುದಕ್ಕೆ ಪ್ರತಿಪಕ್ಷ ಕಾಂಗ್ರೆಸ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೇಲ್ಮನೆ ಸದಸ್ಯ ಪಿ.ಆರ್.ರಮೇಶ್, ''ಬಿಜೆಪಿ ಸದಸ್ಯರ ವಾದ/ಅಭಿಪ್ರಾಯ ಏನೇ ಇದ್ದರೂ ಅದನ್ನು ಸಮಿತಿ ಮುಂದೆ ಹೇಳಲು ಅವಕಾಶವಿತ್ತು. ಆದರೆ ಸಮಿತಿ ಕಾರ್ಯನಿರ್ವಹಿಸುವ ಮುನ್ನವೇ ಸದಸ್ಯರಾದವರು ರಾಜೀನಾಮೆ ಸಲ್ಲಿಸುವುದು



ಪರಿಷತ್‌ನಲ್ಲಿ ನಡೆದಿದ್ದ ಕಹಿ ಘಟನೆ

ಎಷ್ಟರ ಮಟ್ಟಿಗೆ ಸರಿ. ಇದು ಪ್ರಜಾಪ್ರಭುತ್ವಕ್ಕೆ ಗೌರವ ತರುವ ಲಕ್ಷಣವಲ್ಲ,'' ಎಂದು ಆಕ್ರೋಶ ವ್ಯಕ್ತಪಡಿಸಿದರು.

''ಸದನ ಸಮಿತಿಗೆ ನೇಮಕರಾಗಿದ್ದ ಇಬ್ಬರು ಬಿಜೆಪಿ ಸದಸ್ಯರು ರಾಜೀನಾಮೆ ನೀಡಿದ್ದು ಏಕೆ? ಘಟನೆ ಬಗ್ಗೆ ಜನರಿಗೆ ಸತ್ಯ ತಿಳಿಸಬೇಕು ಎಂಬ ಉದ್ದೇಶದಿಂದ ಸದನ ಸಮಿತಿ ರಚಿಸಲಾಗಿದೆ. ಆದರೆ, ಬಿಜೆಪಿ ಸದಸ್ಯರು ಸಮಿತಿಯಿಂದ ಹೊರ ಹೋಗಿರುವುದು ಸತ್ಯ ತಿಳಿಯುವ ಮುನ್ನವೇ ಬಿಜೆಪಿ ಶಸ್ತ್ರತ್ಯಾಗ ಮಾಡಿದೆ,'' ಎಂದು ಟೀಕಿಸಿದರು.

**ಏಕಪಕ್ಷೀಯ ತೀರ್ಮಾನ-ಮಾಧುಸ್ವಾಮಿ**

ಸಭಾಪತಿಗೆ ಸದನ ಸಮಿತಿ ರಚಿಸುವ ಅವಕಾಶವೇ ಇಲ್ಲ. ಅವರ ವಿರುದ್ಧವೇ ಅವಿಶ್ವಾಸ ಮಂಡಿಸಿರುವಾಗ ಅವರೇ ಹೇಗೆ ಸಮಿತಿ ರಚಿಸುತ್ತಾರೆ. ಇದೊಂದು ಏಕಪಕ್ಷೀಯ ತೀರ್ಮಾನ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿ, ''ನಾವ್ಯಾರು ಶಸ್ತ್ರತ್ಯಾಗ ಮಾಡಿಲ್ಲ. ನಮ್ಮ ಪಕ್ಷದ ಸದಸ್ಯರು ಸಮಿತಿಯನ್ನು ಬಹಿಷ್ಕರಿಸಿದ್ದಾರೆ. ಸದನ ಸಮಿತಿ ರಚಿಸುವಾಗ ಆಯಾ ಪಕ್ಷಗಳ ಅಭಿಪ್ರಾಯ ಪಡೆಯಬೇಕು, ಆ ನಂತರ ಸದಸ್ಯರನ್ನ ಸಮಿತಿಗೆ ಆಯ್ಕೆ ಮಾಡಬೇಕು. ಈ ವಿಚಾರದಲ್ಲಿ ಸಭಾಪತಿಗಳು ಏಕಪಕ್ಷೀಯ ತೀರ್ಮಾನ ಕೈಗೊಂಡಿದ್ದಾರೆ. ಮತ್ತೆ ಕೋರಂನೊಂದಿಗೆ ಅದೇನು ಸಭೆ ಮಾಡುತ್ತಾರೋ ನೋಡೋಣ,'' ಎಂದರು.